## ಅಜ್ಞಾನವೇ ಅಪಘಾತಕ್ಕೆ ಕಾರಣ!

ಗುಂಡ ವೇಗವಾಗಿ ಕಾರು ಚಲಾಯಿಸಿ 25 ಜನರನ್ನು ಗಾಯಗೊಳಿಸಿದ.

ನ್ಯಾಯಾಲಯದಲ್ಲಿ ನ್ಯಾಯಾಧೀಶರು ಪ್ರಶ್ನಿಸಿದರು, 'ನೀನು 25 ಜನರನ್ನು ಗಾಯಗೊಳಿಸಿರುವೆ. ನಿನ್ನ ಪರವಾಗಿ ಏನು ಹೇಳುವುದಿದೆ?'

'ಮೈಲಾರ್ಡ್, ನಾನು ವೇಗಮಿತಿಯಲ್ಲಿ ಕಾರು ಚಲಾಯಿಸುತ್ತಿದ್ದೆನಾದರೂ ಬ್ರೇಕ್ ಹಾಕಲು ಪ್ರಯತ್ನಿಸಿದಾಗ ಬ್ರೇಕ್ ಫೇಲ್ ಆಗಿರುವುದು ತಿಳಿಯಿತು. ಎದುರು ಒಂದು ಬದಿಯಲ್ಲಿ ಇಬ್ಬರು ನಡೆದುಕೊಂಡು ಹೋಗುತ್ತಿದ್ದರೆ ಇನ್ನೊಂದು ಬದಿಯಲ್ಲಿ ಮದುವೆ ದಿಬ್ಬಣ ಸಾಗುತ್ತಿತ್ತು. ನಾನೇನು ಮಾಡಲು ಸಾಧ್ಯವಿತ್ತು ಮೈ ಲಾರ್ಡ್?' ಎಂದು ಅಮಾಯಕವಾಗಿ ಗುಂಡ ವಿವರಿಸಿದ.

ನ್ಯಾಯಾಧೀಶರು, 'ಕಡಿಮೆ ಜನರಿದ್ದಲ್ಲಿ ಕಾರು ಚಲಾಯಿಸಿದ್ದರೆ ಕಡಿಮೆ ನಷ್ಟವಾಗುತ್ತಿತ್ತಲ್ಲವೆ?' ಎಂದು ಮರುಪ್ರಶ್ನಿಸಿದರು.

'ನಾನೂ ಹಾಗೆಯೇ ಯೋಚಿಸಿದ್ದೆ ಮೈ ಲಾರ್ಡ್.



ಆದರೆ ಆ ಇಬ್ಬರು ನನ್ನ ಕಾರು ನೋಡಿ ಹೆದರಿ ಮದುವೆ ದಿಬ್ಬಣದೊಂದಿಗೆ ಸೇರಿಕೊಂಡರು' ಎನ್ನುತ್ತಾ ಗುಂಡ ಪ್ರಾಮಾಣಿಕವಾಗಿ ತನ್ನ ಅಸಹಾಯಕತೆ ತೋಡಿಕೊಂಡಾಗ ಆತನ ಅಜ್ಞಾನಕ್ಕೆ ನ್ಯಾಯಾಧೀಶರು ಮರುಗಿದರು!

**ರಮಣ್ ಶೆಟ್ಟಿ ರೆಂಜಾಳ**

---

## ವೇಸ್ಟ್ ಏನಲ್ಲ!

ಮುನ್ನಿಯ ಅಜ್ಜಿ ಹಳ್ಳಿಯಿಂದ ಬಂದಿದ್ದರು. ಮುನ್ನಿ ಅವರೊಂದಿಗೆ ಹೆಚ್ಚು ಸಮಯ ಕಳೆಯಲಾರಂಭಿಸಿದಳು. ಅವರ ಮಾತುಗಳನ್ನೂ ಅನುಕರಿಸುತ್ತಿದ್ದಳು. ಅವರು ಊರಿಂದ ಬಂದ ದಿನ ಮುನ್ನಿಯ ಅಮ್ಮ, 'ಪ್ರಯಾಣ ತುಂಬಾ ಸುಸ್ತಾಯ್ತೇನೋ?' ಎಂದಿದ್ದಕ್ಕೆ ಅಜ್ಜಿ, 'ಇಲ್ಲ, ನಿಮಗಿಂತ ಅದೇನ್ ದೊಡ್ಡದಲ್ಲ ಬಿಡವ್ವಾ' ಎಂದಿದ್ದರು.

ಅಜ್ಜಿ ಊರಿನ, ಬಗೆಬಗೆಯ ಸಾಂಪ್ರದಾಯಿಕ ತಿನಿಸುಗಳನ್ನು ಮಾಡಿದರು. ಅದನ್ನು ತಿನ್ನುವಾಗ, ಮುನ್ನಿಯ ಅಪ್ಪ 'ಅದ್ಯಾವುದೋ ಮುಖ್ಯ ಕಾರ್ಯಕ್ರಮಕ್ಕೆ ಹೋಗಬೇಕು ಅಂತಿದ್ರಿ. ತಿಂಡಿ ಮಾಡೋದರೊಳಗೆ ಅದೆಲ್ಲಾ ಮಿಸ್ ಆಯ್ತಲ್ಲಾ' ಅಂದರು. ಅದಕ್ಕೆ ಅಜ್ಜಿ 'ಬಿಡು ಅದು ನಿಮಗಿಂತ ಮುಖ್ಯವೇನಲ್ಲ' ಎಂದರು.

ಅಷ್ಟೊತ್ತಿಗೆ ಪಕ್ಕದ ಮನೆಯಾಕೆ, 'ಊರಿಂದ



ತಂದ ತರಕಾರಿ ಅಷ್ಟೊಂದ್ ಕೊಡೋದಾ? ಸುಮ್ನೆ ವೇಸ್ಟ್ ಅಲ್ವೇನ್ರೀ' ಎನ್ನುತ್ತಾ ಬಂದರು. ಆಗ ಮುನ್ನಿ ಥಟ್ಟನೆ, 'ಬಿಡೀ ಆಂಟಿ ನಿಮಗಿಂತ ವೇಸ್ಟ್ ಏನಲ್ಲ!' ಅಂದುಬಿಡೋದೇ? ಎಲ್ಲರೂ ಒಮ್ಮೆಗೆ ನಕ್ಕರೂ ಪಕ್ಕದ ಮನೆಯಾಕೆಯ ಮುಖ ಪೆಚ್ಚಾಗಿತ್ತು.

**ಸಂದೇಶ್ ಎಚ್. ನಾಯ್ಕ್**